ಪಿಡಬ್ಲ್ಯೂಃ1

ಇಂದು ದಿನಾಂಕಃ 26.08.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿಯ ಪರ ಶ್ರೀ ಕೆ ಬಿ ಬಿ ವಕೀಲರಿಂದಃ

ಈ ಪ್ರಕರಣದ ವಾದ ಪತ್ರವನ್ನು ಸಲ್ಲಿಸಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಈ ದಾವೆಯನ್ನು ಹೂಡಿದಾಗ ಮೊದಲು ನಾನು ಮಾತ್ರ ವಾದಿಯಾಗಿದ್ದೆ ಎಂದರೆ ಸರಿ. ನಂತರ ಸದರಿ ದಾವೆಯಲ್ಲಿ ವಾದಿ ಸಂಖ್ಯೆ 2 ರಿಂದ 4 ರವರು ಸೇರ್ಪಡೆಗೊಂಡಿರುತ್ತಾರೆ ಎಂದರೆ ಸರಿ. ಸದರಿ ವಾದಪತ್ರದಲ್ಲಿ ನಮ್ಮ ಮತ್ತು ಪ್ರತಿವಾದಿಯರ ಸಂಬಂದವನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ಹಣ ಬರಲಿ ಎಂದು ನಾನು ಮಾಡಿರುತ್ತೇನೆ. ಯಾರ ಜಮೀನು ಎಷ್ಟು ಪ್ರಮಾಣದಲ್ಲಿ ಸರಕಾರ ರಸ್ತೆಯ ಸಲುವಾಗಿ ವಶಪಡಿಸಿಕೊಂಡಿದೆ ಎಂಬುದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸರಕಾರ ಯಾವ ಉದ್ದೇಶಕ್ಕಾಗಿ ಸದರಿ ಜಮೀನನ್ನು ವಶಪಡಿಸಿಕೊಂಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸರಕಾರ ರಸ್ತೆಯನ್ನು ಅಗಲೀಕರಣವನ್ನು ಮಾಡಬೇಕೆಂಬ ಉದ್ದೇಶದಿಂದ ಸುಮಾರು 7 ಗುಂಟೆ ಜಮೀನನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಆ ರೀತಿ ಹಿರೇಕೆರೂರು-ಚಿಕ್ಕೇರೂರು ರಸ್ತೆಯನ್ನು ಅಗಲ ಮಾಡಲು ರಾಜ್ಯ ಸರಕಾರ ಜಮೀನನ್ನು ವಶಪಡಿಸಿಕೊಂಡಿರುತ್ತದೆ. ಯಾವ ರಸ್ತೆಗಾಗಿ ಎಷ್ಟು ಪ್ರಮಾಣದ ಜಮೀನನ್ನು ಸರಕಾರ ವಶಪಡಿಸಿಕೊಂಡಿದೆ ಎಂಬುದರ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

2. 2 ರಿಂದ 4 ನೇ ವಾದಿಯರಿಗೂ ಹಾಗೂ ಪ್ರತಿವಾದಿಗೆ ಯಾವುದೇ ಸಂಬಂದ ಇಲ್ಲ ಎಂದರೆ ಸಾಕ್ಷಿಯು ಸರ್ವೆನಂಬರಿಗೆ ಸಂಬಂದಪಟ್ಟಂತೆ ಸಂಬಂದ ಇರುತ್ತದೆ ಎಂದು ನುಡಿದಿರುತ್ತಾರೆ. ಸರ್ವೆನಂ.73/2 ಮೂಲತಃ ನನ್ನ ಅಜ್ಜನ ಜಮೀನು ಎಂದರೆ ಸರಿ. ನನ್ನ ಅಜ್ಜನಿಗೆ 4 ಜನ ಹೆಣ್ಣು ಮಕ್ಕಳು, 2 ಜನ ಗಂಡು ಮಕ್ಕಳು ಇರುತ್ತಾರೆ. ಆ ರೀತಿ ಮಕ್ಕಳೆಂದರೆ ಧರ್ಮಗೌಡ ಮತ್ತು ವಾಮನಗೌಡ ಮತ್ತು ದಿಗ್ಗವ್ವ, ಸಾವಕ್ಕ, ಮಲ್ಲಮ್ಮ, ಹಾಲವ್ವರಾವಗಿರುತ್ತಾರೆ. ಧರ್ಮಗೌಡ ರವರಿಗೆ ತನ್ನ ಹೆಂಡತಿ ಪಾರ್ವತವ್ವ ಹಾಗೂ ರಾಮಗೌಡ ಎಂಬ ಮಗ ಇರುತ್ತಾರೆ. ವಾಮಗೌಡರವರಿಗೆ ಇಬ್ಬರು ಹೆಂಡತಿಯರು ಇದ್ದು ಅದರಲ್ಲಿ ಗಿರಿಜವ್ವ, 2 ನೇ ಹೆಂಡತಿ ಪುಟ್ಟವ್ವ. ಅವರಿಗೆ 3 ಜನ ಮಕ್ಕಳು ಇದ್ದು, 2 ನೇ ಹೆಂಡತಿಗೆ ಸೌಭಾಗ್ಯ ಮತ್ತು ಶಂಭು ಆಗಿದ್ದು, ಮೊದಲನೇ ಹೆಂಡತಿಯ ಮಗಳು ಸವಿತಾ ಆದ ನಾನು ಇರುತ್ತೇನೆ. ನಾನು ದಿಗ್ಗವ್ವನ ಸಾಕುಮಗಳು ಎಂದು ಹೇಳಲು ನಾನು ಯಾವುದೇ ದಾಖಲೆಗಳನ್ನು ಹಾಜರಪಡಿಸಿರುವುದಿಲ್ಲ. ನಾನು ಸಾಕುಮಗಳು ಎಂದು ಹೇಳಿ ನಾನು ಎಲ್ಲಿಯೂ ನೊಂದಣಿ ಮಾಡಿಸಿರುವುದಿಲ್ಲ. ಆದರೆ ನಾನು ದಿಗ್ಗವ್ವನ ಸಾಕು ಮಗಳಾಗಿರುತ್ತೇನೆ. 2 ರಿಂದ 4 ನೇ ವಾದಿಯರು ನಮ್ಮ ಕುಟುಂಬಕ್ಕೆ ಯಾವುದೇ ಸಂಬಂಧಿಕರಾಗಿರುವುದಿಲ್ಲ. ನ್ಯಾಯಾಲಯಕ್ಕೆ ನಾನೇ ದಾಖಲೆಗಳನ್ನು ಹಾಜರಪಡಿಸಿರುತ್ತೇನೆ.

3. ಈ ದಾವೆಯಲ್ಲಿ ವಾದಪತ್ರವನ್ನು ತಿದ್ದುಪಡಿ ಮಾಡಲು ಅರ್ಜಿಯನ್ನು ನಾನೇ ಸಲ್ಲಿಸಿರುತ್ತೇನೆ. ಆ ರೀತಿ ನಾನು ಅರ್ಜಿಯಲ್ಲಿ ಹೇಳಿದ ರೀತಿಯಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಿರುವ ವಾದಪತ್ರದಲ್ಲಿ ತಿದ್ದುಪಡಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಮೂಲ ವಾದಪತ್ರದಲ್ಲಿ ದಾವಾ ಆಸ್ತಿಯಲ್ಲಿ ಅರ್ಧ ಭಾಗ ಬರಬೇಕು ಎಂದು ಹೇಳಿ ನ್ಯಾಯಾಲಯದ ಶುಲ್ಕವನ್ನು ತುಂಬಿರುತ್ತೇನೆ ಎಂದರೆ ಸಾಕ್ಷಿಯು 2/3 ಭಾಗ ಬರಬೇಕು ಎಂದು ಹೇಳಿ ನಾನು ವಾದ ಪತ್ರವನ್ನು ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಆ ರೀತಿ ನನಗೆ 2/3 ಭಾಗ ಬರಬೇಕು ಎಂದು ಹೇಳಿ ನಾನು ನ್ಯಾಯಾಲಯದ ಶುಲ್ಕವನ್ನು ತುಂಬಿಲ್ಲ ಎಂದರೆ ಸರಿಯಲ್ಲ.

4. ನಿಪಿ-1 ರ ಅನುಸೂಚಿಯಲ್ಲಿ ಮರಿಗೌಡರು,ಪಾರ್ವತಮ್ಮ, ಧರ್ಮಗೌಡ, ಓಮನಗೌಡ, ಸವಿತಾ, ಚನ್ನಬಸಮ್ಮ, ಸೋಮಶೇಖರ, ನಾಗರಾಜ ಎಂದು ನಮೂದಿಸಿರುತ್ತಾರೆ ಎಂದರೆ ಸರಿ. ಆ ರೀತಿ ನಿಪಿ-1 ರಲ್ಲಿ ಮೇಲೆ ಹೇಳಿದ ಹೆಸರುಗಳಲ್ಲಿ ಯಾರ ಜಮೀನು ಸರಕಾರಕ್ಕೆ ವಶಪಡಿಸಿಕೊಳ್ಳಲಾಗಿದೆಯೋ ಅವರು ದಾಖಲೆಗಳನ್ನು ಹಾಜರಪಡಿಸಿದ್ದಲ್ಲಿ ಅವರಿಗೆ ಪರಿಹಾರವನ್ನು ನೀಡಲಾಗುವುದು ಎಂದು ನಮೂದಿಸಿರುತ್ತಾರೆ ಎಂದರೆ ಸಾಕ್ಷಿಯು ನಾನೇ ಮೊದಲು ಆರ್ ಟಿ ಸಿ ಯನ್ನು ಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ಸದರಿ ಆರ್ ಟಿ ಸಿ ಯನ್ನು ಹೊರತುಪಡಿಸಿ ಇತರೆ ಯಾವುದೇ ದಾಖಲೆಗಳನ್ನು ನಾನು ನೀಡಿರುವುದಿಲ್ಲ. ನಿಪಿ-1 ರಂತೆ ಕೇವಲ 7 ಗುಂಟೆ ಜಮೀನನ್ನು ಮಾತ್ರ ವಶಪಡಿಸಿಕೊಳ್ಳಲಾಗಿದೆ ಎಂದರೆ ಸರಿ.

5. ನಿಪಿ-2 ಆರ್ ಟಿ ಸಿ ಪ್ರತಿವಾದಿಯ ಹೆಸರಿನಲ್ಲಿದ್ದು, ಅದನ್ನು ನಾನು ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತೇನೆ ಎಂದರೆ ಸರಿ. ಸದರಿ ಆರ್ ಟಿ ಸಿ ಯಲ್ಲಿ ಪ್ರತಿವಾದಿಗೆ ಸೇರಿದ ಜಮೀನು 3 ಎಕರೆ 9 ಗುಂಟೆ ಜಮೀನು ಇದ್ದು ಅದರಲ್ಲಿ 7 ಗುಂಟೆ ಜಮೀನನ್ನು ಪೋಠ ಕರಾಬು (ಬಿ) ನಂತರ ಸರಕಾರ ವಶಪಡಿಸಿಕೊಳ್ಳಲಾಗಿದೆ ಎಂದರೆ ಸಾಕ್ಷಿಯು ಸರ್ವೆನಂಬರ 73/2 ಪಿ ಅಷ್ಟೇ ಅಲ್ಲದೇ ಇತರೆ ಜಮೀನಗಳನ್ನು ಕೂಡ ಸರಕಾರ ವಶಪಡಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ನಿಪಿ-3 ಸರ್ವೆನಂಬರ 73/1 ಆರ್ ಟಿ ಸಿ ಯಾಗಿದ್ದು ಅದರಲ್ಲಿ ಒಟ್ಟು ಜಮೀನು 8 ಎಕರೆ 5 ಗುಂಟೆ ಇದೆ ಎಂದರೆ ಸರಿ. ಸದರಿ ಜಮೀನಿನಲ್ಲಿ ಯಾವುದೇ ಪೋಠ ಕರಾಬು ಆಗಿಲ್ಲ ಎಂದು ಸರಿ. ಸಾಕ್ಷಿಯು ಮುಂದುವರೆದು ಇದು ಬೇರೆ ಭಾಗದ ಜಮೀನು ಆಗಿರುತ್ತದೆ ಎಂದದು ನುಡಿದಿರುತ್ತಾರೆ. ಈ ಜಮೀನು ರಸ್ತೆಯ ಪಕ್ಕಕ್ಕೆ ಇರುವುದಿಲ್ಲ. ನಿಪಿ-4 ಸರ್ವೆನಂಬರ 73/7 2 ಪಿ 3 ಆರ್ ಟಿ ಸಿ ಆಗಿದ್ದು, ಸದರಿ ದಾಖಲೆಯಲ್ಲಿ ಆಸ್ತಿಯು 3 ಎಕರೆ 1 ಗುಂಟೆ ಇರುತ್ತದೆ ಎಂದರೆ ಸರಿ. ಆ ಜಮೀನಿನಲ್ಲಿಯೂ ಯಾವುದೇ ರೀತಿಯ ಪೋಠ ಕರಾಬು ಇಲ್ಲ ಎಂದರೆ ಸರಿ.

6. ನಾನು ಹಾಜರಪಡಿಸಿರುವ ನಿಪಿ-2 ರಿಂದ 4 ದಾಖಲೆಗಳಲ್ಲಿ ಸರಕಾರವು ನಿಪಿ-2 ರಲ್ಲಿ 7 ಗುಂಟೆ ಜಮೀನನ್ನು ವಶಪಡಿಸಿಕೊಂಡಿರುವುದು ಹೊರತುಪಡಿಸಿ ಉಳಿದ ನಿಪಿ-3 ಮತ್ತು 4

ದಾಖಲೆಗಳಲ್ಲಿ ಯಾವುದೇ ಆಸ್ತಿಗಳನ್ನು ವಶಪಡಿಸಿಕೊಂಡಿರುವುದಾಗಿ ಕಂಡುಬರುವುದಿಲ್ಲ ಎಂದರೆ ಸರಿ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.